## ಶಾರೂಕ್ ವಿವಾದ



ಸುಮ್ಮನೆ ಲಹರಿಯಲ್ಲಿ ಸ್ವವಿಚಾರಗಳನ್ನು ಬರೆದರೂ ವಿವಾದಗಳು ಬೆನ್ನತ್ತಿ ಬರುತ್ತಿರುವುದು ನಿಜಕ್ಕೂ ದುರದೃಷ್ಟಕರ. ಅದರಲ್ಲೂ ಶಾರೂಕ್ ಖಾನ್ ನಂತಹ ಪ್ರತಿಭಾವಂತ ಹಾಗೂ ಬಾಲಿವುಡ್‌ನ ವ್ಯವಹಾರಗಳ ಕೇಂದ್ರ-ಬಿಂದುವಿಗೇ ಹೀಗಾದರೆ ಉಳಿದವರು ಪಾಡೇನು?

47ರ ಹರೆಯದ ಶಾರೂಕ್ ಅಭಿಮಾನಿಗಳು ಭಾರತ, ಪಾಕಿಸ್ತಾನ ಮಾತ್ರವಲ್ಲ, ಹಿಂದಿ ಸಿನಿಮಾ ನೋಡುವ ಜನರು ಇರುವ ಎಲ್ಲ ದೇಶಗಳಲ್ಲೂ ಇದ್ದಾರೆ. ಸ್ವಲ್ಪ ಉಡಾಫೆ, ಸ್ವಲ್ಪ ಸಿಲ್ಲಿ ಎನ್ನುವಂತಹ ಮಾತುಗಳನ್ನು ಕೆಲವು ಸಲ ಶಾರೂಕ್ ಆಡುತ್ತಾನಾದರೂ ಈಗ ಕೆಲವರು ಆರೋಪಿಸುವಂತೆ ದೇಶ-ವಿರೋಧಿ ಮಾತುಗಳನ್ನು ಎಂದೂ ಆಡಿದವನಲ್ಲ. ಪಾಕಿಸ್ತಾನ ಆಳುವವರು ಈಗ ಶಾರೂಕ್ ಮೇಲೆ ತೋರಿಸುತ್ತಿರುವ ಹುಸಿ ಪ್ರೀತಿಯ ಹಿಂದೆ ರಾಜಕೀಯದ ವಿಷಗಾಳಿ ಇದೆ. ಶಾರೂಕ್ ಖಾನ್ ಬಿಡಿ, ಬೇರೆ ಯಾರೇ ಬಾಲಿವುಡ್ ಸೆಲೆಬ್ರಿಟಿಗಳು ಪಾಕಿಸ್ತಾನಕ್ಕೆ ವಲಸೆ ಹೋದರೂ ಅಲ್ಲಿ ಜೀವಭಯದಿಂದಾಗಿ ಕೆಲವೇ ದಿನಗಳಲ್ಲಿ ಮತ್ತೆ ದೇಶಾಂತರ ಹೋಗಬೇಕಾದಂತಹ ಪರಿಸ್ಥಿತಿ ಇದೆ. ಸ್ವತಃ ಅಲ್ಲಿನ ಜನಪ್ರಿಯ ಪ್ರಧಾನಿ ಬೆನಜೀರ್ ಭುಟ್ಟೋ ಅವರಿಗೇ ರಕ್ಷಣೆ ಕೊಡಲಾಗದ ಅಲ್ಲಿನ ಭದ್ರತಾ ವ್ಯವಸ್ಥೆ ಶಾರೂಕ್‌ಗೆ ರಕ್ಷಣೆ ಕೊಡುವುದಾಗಿ ಅಭಯ ನೀಡಿರುವುದು ಹಾಸ್ಯಾಸ್ಪದವಾಗಿದೆ.

ಈಗಾಗಲೆ 75 ಸಿನಿಮಾಗಳಲ್ಲಿ ನಟಿಸಿ ಇವತ್ತಿಗೂ ಬಾಕ್ಸಾಫೀಸ್ ಸರದಾರ ಎನ್ನಿಸಿಕೊಂಡಿರುವ ಶಾರೂಕ್ ನಟಿಸಿರುವ ಇತ್ತೀಚಿನ 12 ಸಿನಿಮಾಗಳೂ 100 ಕೋಟಿ ರೂಪಾಯಿ ಸಂಗ್ರಹದ ಗಡಿ ದಾಟಿವೆ. ಬಾಲಿವುಡ್ ಮಟ್ಟಿಗೆ ಇದೊಂದು ದಾಖಲೆಯೇ. 'ನನ್ನ ಬಗ್ಗೆ ಕೆಲವರ ತಕರಾರುಗಳು ಏನೇ ಇದ್ದರೂ ಈ ಲಕ್ಷಾಂತರ ದೇಶವಾಸಿಗಳು ಮತ್ತು ಹುಡುಗಿಯರು ತೋರುತ್ತಿರುವ ಪ್ರೀತಿಯಿಂದಾಗಿ ನಾನು ಯಾವ ಕುತಂತ್ರಗಳಿಗೂ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದು ಶಾರೂಕ್ ವಿದೇಶಿ ಮ್ಯಾಗಸಿನ್ ಒಂದಕ್ಕೆ ನೀಡಿದ ಹೇಳಿಕೆ ಸರಿಯಾಗಿಯೇ ಇದೆ.

ಶಾರೂಕ್‌ನ ಹೊಸ ಸಿನಿಮಾ ಘೋಷಣೆಯಾಗಿದೆ. 'ಹ್ಯಾಪಿ ನ್ಯೂ ಇಯರ್' ಎನ್ನುವುದು ಆ ಚಿತ್ರದ ಟೈಟಲ್. ವಿನಾ ಕಾರಣ ತೇಜೋವಧೆ ಮಾಡುವ ಪ್ರಯತ್ನಗಳ ಮಧ್ಯೆಯೂ ಈ ಪದ್ಮಶ್ರೀ ವಿಜೇತ ನಟ ಇನ್ನಷ್ಟು ಮನರಂಜನೆಯ ಚಿತ್ರಗಳನ್ನು ಬೆಳ್ಳಿತೆರೆಗೆ ನೀಡಲಿ. ಜತೆಗೆ ಪ್ರೇಕ್ಷಕರನ್ನು ವಿಚಾರಕ್ಕೆ ಹಚ್ಚುವಂತಹ ಚಿತ್ರಗಳಲ್ಲೂ ನಟಿಸಲಿ.

■ ಬಿಂದು

